# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀಮತಿ ಎಸ್.ಬಿ ಮಂಜುಳ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಚಿ.ಕಡದಕಟ್ಟೆ ಗ್ರಾಮ ಪಂಚಾಯಿತಿ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು ಇಲ್ಲಿ ದಾಖಲಿಸಿರುವ ಅರ್ಜಿ ಸಂಖ್ಯೆ:606/2019 C/w 8022/2018 ರ ಕುರಿತಂತೆ ಮಾನ್ಯ ನ್ಯಾಯಾಲಯದ ಆದೇಶದನ್ವಯ ಕ್ರಮವಹಿಸುವ ಕುರಿತು.

**ಓದಲಾಗಿದೆ:**

1. ಸರ್ಕಾರದ ಸಮ ಸಂಖ್ಯೆಯ ಆದೇಶ, ದಿನಾಂಕ: 26.10.2018.
2. ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು, ಅರ್ಜಿ ಸಂಖ್ಯೆ: 606/2019 C/w 8022/2018 ರ ಪ್ರಕರಣದಲ್ಲಿ ನೀಡಿದ ಆದೇಶ, ದಿನಾಂಕ: 13.01.2021.
3. ಸರ್ಕಾರಿ ವಕೀಲರು, ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು ರವರ ಅಭಿಪ್ರಾಯ, ದಿನಾಂಕ0:10/25.02.2021.
4. ಕಾನೂನು ಕೋಶದ ಮುಖ್ಯಸ್ಥರ ಹಾಗೂ ಕಾನೂನು ಇಲಾಖೆಯ ಅಭಿಪ್ರಾಯಗಳು, ದಿನಾಂಕ:05.08.2021 ಮತ್ತು ದಿನಾಂಕ:12.08.2021.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಾಂಕ (1)ರ ಆದೇಶದಲ್ಲಿ ಶ್ರೀಮತಿ ಎಸ್.ಬಿ ಮಂಜುಳ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಚಿ.ಕಡದಕಟ್ಟೆ ಗ್ರಾಮ ಪಂಚಾಯಿತಿ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರು ಚಿ.ಕಡದ ಕಟ್ಟೆ ಗ್ರಾಮ ಪಂಚಾಯಿತಿಯಲ್ಲಿ ಕರವಸೂಲಿಗಾರರ ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ ಕರ್ತವ್ಯ ಲೋಪ ಸಾಬೀತಾಗಿರುವ ಹಿನ್ನೆಲೆಯಲ್ಲಿ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನಂತೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 8(iii) ರಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ರಹಿತವಾಗಿ ಮೂರು ವರ್ಷಗಳ ಕಾಲ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಮೇಲೆ ಓದಲಾದ ಕ್ರಮಾಂಕ (2)ರಲ್ಲಿ ಶ್ರೀಮತಿ ಎಸ್.ಬಿ ಮಂಜುಳ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಚಿ.ಕಡದಕಟ್ಟೆ ಗ್ರಾಮ ಪಂಚಾಯಿತಿ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರು ಸರ್ಕಾರದ ದಂಡನಾದೇಶ ಸಂಖ್ಯೆ:ಗ್ರಾಅಪ 707 ಗ್ರಾಪಂಕಾ 2016, ದಿನಾಂಕ: 26.10.2018 ಅನ್ನು ಪ್ರಶ್ನಿಸಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು ಇಲ್ಲಿ ಅರ್ಜಿ ಸಂಖ್ಯೆ:606/2019 ಅನ್ನು ದಾಖಲಿಸಿದ್ದು, ಈ ಪ್ರಕರಣದ ಕುರಿತಂತೆ ಮಾನ್ಯ ನ್ಯಾಯ ಮಂಡಳಿಯು ದಿನಾಂಕ:13.01.2021ರ ಆದೇಶದಲ್ಲಿ ಅರ್ಜಿದಾರರ ಅರ್ಜಿಯನ್ನು ಅಂಗೀಕರಿಸಿ, ಸರ್ಕಾರದ ದಿನಾಂಕ:26.10.2018 ರ ಆದೇಶವನ್ನು ರದ್ದುಗೊಳಿಸಿರುತ್ತದೆ. ಮಾನ್ಯ ನ್ಯಾಯ ಮಂಡಳಿಯ ಆದೇಶದ ಉದೃತ ಭಾಗ ಈ ಕೆಳಕಂಡಂತಿರುತ್ತದೆ.

> A.No.606/2019 filed by Smt.Manjula.S.B is allowed and impugned order bearing No.Gra.Aa.Pa 707 Gra.Pam.Ka 2016 dated 26.10.2018 Passed by the 1st respondent and produced vide Annexure-A20 in the said application is here by set aside and the respondent-Government is hereby directed to pay all consequential including monetary benefits to the applicant to which she is legally entitled to. Time for compliance is three months from the date of receipt of copy of this order.

ಮೇಲೆ ಓದಲಾದ ಕ್ರಮಾಂಕ (3)ರಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ:606/2019 C/w 8022/2018 ರ ಪ್ರಕರಣದಲ್ಲಿ ದಿನಾಂಕ:13.01.2021ರಂದು ನೀಡಿದ ಆದೇಶದ ಕುರಿತಂತೆ ಸರ್ಕಾರಿ ವಕೀಲರು, ಮಾನ್ಯ ಕೆ.ಎ.ಟಿ ರವರು ಅಭಿಪ್ರಾಯಿಸಿರುವ ಉದೃತ ಭಾಗ ಈ ಕೆಳಕಂಡಂತಿರುತ್ತದೆ.

> A.No.606/2019 filed by Smt.Manjula.S.B is allowed and impugned order bearing No.Gra.Aa.Pa 707 Gra.Pam.Ka 2016 dated 26.10.2018 Passed by the 1st respondent and produced vide Annexure-A20 in the said application is here by set aside and the respondent-Government is hereby directed to pay all consequential including monetary benefits to the applicant to which she is legally entitled to. Time for compliance is three months from the date of receipt of copy of this order.

...2

Therefore, In view of the above said reasons, I am of the opinion that these are not a fit case to file writ petitions against the said order.

ಮೇಲೆ ಓದಲಾದ ಕ್ರಮಾಂಕ (4) ರಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದಿನಾಂಕ:13.01.2021 ರಂದು ನೀಡಿದ ಆದೇಶದ ಕುರಿತಂತೆ ಕಾನೂನು ಕೋಶದ ಮುಖ್ಯಸ್ಥರು ನೀಡಿರುವ ಅಭಿಪ್ರಾಯವನ್ನು ಕಾನೂನು ಇಲಾಖೆ ಅನುಮೋದಿಸಿದ್ದು, ಕಾನೂನು ಕೋಶದ ಮುಖ್ಯಸ್ಥರವರ ಅಭಿಪ್ರಾಯ ಈ ಕೆಳಕಂಡಂತಿರುತ್ತದೆ.

Therefore, it is the observation of Hon'ble KAT that as per this Rule, the requirements are that the enquiry officer ought to have prepared the questionnaire so far as the incriminating evidence as against the applicant appeared in the evidence of PWI and then the enquiry officer ought to have read over the questionnaire to the DGO and whatever the answers given by the DGO ought to have been recorded in his statement. Then he could have proceeded with the hearing of the case, but same was not at all done in this case. Therefore, there is non-compliance of mandatory requirement of Rule 11(18) of KCS (CCA) Rules, 1957 so far as the applicant Sri H.K.Revanasiddana Gouda in the connected application is concerned, and to that extent, it is necessary to remit back the case to the disciplinary authority for compliance.

For the above said reasons and discussions, I am of the opinion that there are no reasonable grounds to challenge the order of the Hon'ble Tribunal.

The Head of Legal Cell concurs with the opinion of High Court Govt. Pleader. As such, there arises no any reasonable grounds to refer appeal is the opinion of Head of Legal Cell.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಲಾಗಿ, ಈ ಪ್ರಕರಣದಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಅರ್ಜಿ ಸಂಖ್ಯೆ:606/2019 C/w 8022/2018 ರಲ್ಲಿ ದಿನಾಂಕ:13.01.2021 ರಂದು ನೀಡಿರುವ ಆದೇಶದ ಕುರಿತಂತೆ ಕಾನೂನು ಕೋಶದ ಮುಖ್ಯಸ್ಥರ ಅಭಿಪ್ರಾಯವನ್ನು ಕಾನೂನು ಇಲಾಖೆಯು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಶ್ರೀಮತಿ ಎಸ್.ಬಿ ಮಂಜುಳ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಚಿ.ಕಡದಕಟ್ಟೆ ಗ್ರಾಮ ಪಂಚಾಯಿತಿ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ಮೇಲಿನ ಆಪಾದನೆಗೆ ಸಂಬಂಧಿಸಿಂತೆ ಈ ಹಿಂದೆ **ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 707 ಗ್ರಾಪಂಕಾ 2016, ದಿನಾಂಕ:26.10.2018 ರಂದು** ವಿಧಿಸಲಾಗಿದ್ದ ದಂಡನಾದೇಶವನ್ನು ಹಿಂಪಡೆಯಲು ನಿರ್ಣಯಿಸಿದೆ. ಅದರಂತೆ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/707/ಗ್ರಾಪಂಕಾ/2016, ಬೆಂಗಳೂರು, ದಿನಾಂಕ:02.06.2022.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ ಎಸ್.ಬಿ ಮಂಜುಳ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಚಿ.ಕಡದಕಟ್ಟೆ ಗ್ರಾಮ ಪಂಚಾಯಿತಿ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿಂತೆ ದಂಡನೆ ವಿಧಿಸಿ ಹೊರಡಿಸಲಾದ **ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 707 ಗ್ರಾಪಂಕಾ 2016, ದಿನಾಂಕ:26.10.2018** ರ ಆದೇಶವನ್ನು ಸರ್ಕಾರವು ಹಿಂಪಡೆದು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

14.14 2/6/22

**(ಎಂ.ಎಂ ರಾಜು)**
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**<u>ಗೆ,</u>**

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.

2. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
3. ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ದಾವಣಗೆರೆ ಜಿಲ್ಲೆ.
6. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಹೊನ್ನಾಳಿ, ದಾವಣಗೆರೆ ಜಿಲ್ಲೆ.
7. ಸರ್ಕಾರಿ ವಕೀಲರು, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು.
8. ಶ್ರೀಮತಿ ಎಸ್.ಬಿ ಮಂಜುಳ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಚಿ.ಕಡದಕಟ್ಟೆ ಗ್ರಾಮ ಪಂಚಾಯಿತಿ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.
9. ಗಣಕ ಕೋಶ.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

**<u>ಪ್ರತಿ ಮಾಹಿತಿಗಾಗಿ</u>**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

*********